ತನ್ನಲ್ಲೂ ಸಾಕಷ್ಟು ಅರಿವಿಲ್ಲ ಎನ್ನುವುದು ಅವರಿಗೆ ಗೊತ್ತಿಲ್ಲದ್ದಲ್ಲ. ಅಲ್ಲದೆ ತಾನು ದಾಂಪತ್ಯದಲ್ಲಿ ಬಿರುಕು ಕಾಣಿಸಿಕೊಂಡವರ ಬಗ್ಗೆ ಎಂದೂ ಮಧ್ಯಸ್ಥಿಕೆ ನಡೆಸಿದವನೂ ಅಲ್ಲ ಎಂದುಕೊಂಡ ಅವರು, ಇದು ಬಹಳ ಸುಲಭ ಎಂಬಂತೆ ಜಯಂತಿಯ ಮಾತಿಗೆ ಒಪ್ಪಿಕೊಂಡು ಬಂದರೆ, ಇದು ದಾಂಡಿಗರು ತನ್ನ ಮನೆಗೆ ನುಗ್ಗಿ ಬಂದ ಹಾಗೆ ಸಂಕೀರ್ಣದ್ದು ಅಥವಾ ಸಂಕಷ್ಟದ ವಿಚಾರ ಎಂದು ಆತಂಕಗೊಂಡರು. ಆದರೂ ಅವರು ಮುಖದಲ್ಲಿ ನಗೆ ತಂದುಕೊಳ್ಳಲಿಕ್ಕೆ ಪ್ರಯತ್ನಿಸುತ್ತಾ 'ಸಾರಿ ಮಿಸ್ಟರ್ ಸಂಜೀವರಾವ್. ನಾನು ನಿಮ್ಮನ್ನು ಪ್ರಶ್ನಿಸುವುದೂ ಇಲ್ಲ. ಕೌನ್ಸೆಲ್ಲಿಂಗ್ ಮಾಡಲು ಬಂದವನೂ ಅಲ್ಲ. ನಿಮ್ಮ ಒಬ್ಬ ಹಿತೈಷಿಯಾಗಿ ಏನು ನಿಮಗೆ ಸಲಹೆ ಕೊಡಬಲ್ಲೆ ಎಂಬ ಪ್ರಯತ್ನವಷ್ಟೇ ನನ್ನದು' ಎಂದು ಕೈ ಮುಗಿದರು.

ಸಂಜೀವರಾಯರಿಗೆ ಮುಜುಗರವಾಯಿತು. ಅವರು, 'ಛೆ ಛೆ, ನೀವು ಅಂಥ ಮಾತು ಹೇಳಬಾರದು ಸರ್. ನೀವು ನನ್ನ ತಂದೆಗೆ ಸಮಾನ ಎಂದೇ ನಾನು ನಿಮ್ಮ ಜೊತೆ ಮಾತುಕತೆಗೆ ಸಿದ್ಧನಾಗಿದ್ದೇನೆ. ನೀವು ಎಂಥ ಪ್ರಶ್ನೆ ಬೇಕಾದರೂ ಹಾಕಬಹುದು ಅಥವಾ ಜನಸಾಮಾನ್ಯರು ಅಶ್ಲೀಲ ಎಂದುಕೊಳ್ಳುವ ಲೈಂಗಿಕ ವಿಚಾರಕ್ಕೆ ಸಂಬಂಧಿಸಿದ ವಿಷಯಗಳ ಕುರಿತೂ ನೀವು ಕೇಳಬಹುದು' ಎಂದರು. ರಾಯರಿಗೆ ಅವರ ಮಾತಿನಲ್ಲಿ ಮುಜುಗರ ಇಲ್ಲ ಅನಿಸಿತು. ಪ್ರಾಮಾಣಿಕತೆ ಇದೆ ಎಂದು ಖುಷಿಯಾಯಿತು.

ರಾಯರು ತುಸು ಗಂಭೀರವಾಗಿ 'ನಿಮ್ಮದು ಪ್ರೇಮವಿವಾಹ ಎಂದು ನನಗೆ ಗೊತ್ತು. ಆದರೆ ನಿಮ್ಮ ಅತ್ತೆಗೆ ನಿಮ್ಮ ಮದುವೆ ವಿಚಾರದಲ್ಲಿ ಹೆಚ್ಚು ಆಸಕ್ತಿ ಇರಲಿಲ್ಲ ಎನ್ನುವುದು ನಿಮಗೆ ಗೊತ್ತಿಲ್ಲದಿದ್ದರೂ ನನ್ನ ಬಳಿ ಆಕೆ ಹೇಳಿಕೊಂಡಿದ್ದಿದೆ. ನಿಮ್ಮ ಅತ್ತೆಯ ದೂರದ ಸಂಬಂಧಿಯೊಬ್ಬರು ಸಾಫ್ಟ್‌ವೇರ್ ಫೀಲ್ಡ್‌ನಲ್ಲಿ ಇದ್ದು, ಆತನಿಗೆ ಆಯುಷಿಯನ್ನು ಮದುವೆ ಮಾಡಿಕೊಡಬೇಕೆಂಬ ಮನಸ್ಸು ಅವರಲ್ಲಿತ್ತು. ಆದರೆ ಅದನ್ನು ಆಕೆ ಆಯುಷಿಗೆ ಪ್ರಾಯಶಃ ಹೇಳಿರಲಿಲ್ಲ. ಹೇಳಿದ್ದರೂ ಆಯುಷಿ ತಿರಸ್ಕರಿಸಬಹುದಿತ್ತೇನೋ' ಎಂದು ಕ್ಷಣ ಹೊತ್ತು ಮಾತು ನಿಲ್ಲಿಸಿ, 'ಈಗ ನಿಮ್ಮ ಅತ್ತೆಗೆ ಈ ಸಂಬಂಧದಿಂದ ಎಡವಟ್ಟಾಯಿತಲ್ಲ ಎಂಬ ನೋವಿದೆ. ಅವರ ಕಡೆಯಿಂದ ನಿಮ್ಮಿಬ್ಬರ ನಡುವೆ ಇರುವ ಬಿರುಕನ್ನು ಹೋಗಲಾಡಿಸಲು ಬೇರೆ ಯಾರೂ ಇಲ್ಲ ಅಂತ ನನ್ನನ್ನು ಆಕೆ ಇಲ್ಲಿಗೆ ಕರೆಸಿದ್ದಾರೆ. ಅಫ್‌ಕೋರ್ಸ್, ನಾನು ನಿಮ್ಮ ಅತ್ತೆಯ ಕುಟುಂಬದವನೇ ಅಂತ ನೀವು ಇಟ್ಟುಕೊಳ್ಳಬಹುದು' ಎಂದರು ಗಂಭೀರವಾಗಿ.

'ಹೌದು ಸರ್. ನಮ್ಮ ಅತ್ತೆಯ ಈ ವಿಚಾರವನ್ನು ನಮ್ಮ ಮದುವೆಗೆ ಮುಂಚೆ ಆಯುಷಿಯೇ ನನ್ನಲ್ಲಿ ಹೇಳಿದ್ದಾಳೆ. ಆದರೆ ಆಗಲೇ ನಾವು ಪ್ರೀತಿಯಲ್ಲಿ ಸಾಕಷ್ಟು ಮುಂದೆ ಬಂದಾಗಿತ್ತು. ಅದನ್ನೇ ಆಕೆ ತನ್ನ ತಾಯಿಗೆ ಹೇಳಿದಾಗ 'ಸರಿ ನಿನ್ನಿಷ್ಟ' ಎಂದಿದ್ದರಂತೆ ಅತ್ತೆ'.

'ಹೌದು ಆಗ ನಾನು ರಾಂಪುರದಲ್ಲೇ ಪ್ರೊಫೆಸರ್ ಆಗಿದ್ದೆನಲ್ಲ. ಅದು ನನಗೂ ಗೊತ್ತು' ಎಂದರು ರಾಯರು.

ಸಂಜೀವರಾಯರು 'ಹೌದು' ಎನ್ನುವಂತೆ ತಲೆ ಅಲ್ಲಾಡಿಸಿ, 'ಮುಂದೆ ಏನು ಕೇಳುತ್ತೀರಿ?' ಎಂಬಂತೆ ಮೌನವಾದರು.

ರಾಯರು 'ನಿಮ್ಮ ಪ್ರೇಮ ಪ್ರಕರಣ ಪ್ರಾರಂಭವಾದಾಗ ನಿಮ್ಮಲ್ಲಿ ಏನು ದೌರ್ಬಲ್ಯ ಇದೆ ಎಂದು ನಿಮ್ಮ ಹೆಂಡತಿ ಈಗ ಆರೋಪಿಸುತ್ತಾಳೋ ಅದು ನಿಮ್ಮ ಗಮನದಲ್ಲಿ ಇರಲಿಲ್ಲವೋ ಹೇಗೆ? ಇದ್ದರೆ ನೀವು ಈ ಮದುವೆಗೆ ಮುಂದುವರಿಯಬಾರದಿತ್ತಲ್ಲ?' ಎಂದು ಮುಜುಗರದಿಂದಲೇ ಪ್ರಶ್ನಿಸಿದರು. ಆದರೆ ಸಂಜೀವರಾಯರು ಯಾವುದೇ ಮುಜುಗರಪಡದೆ, 'ಹಾಗೇನಿಲ್ಲ ಸರ್. ನಮ್ಮ ಪ್ರೇಮಪ್ರಕರಣ ಪ್ರಾರಂಭವಾದದ್ದು ಸಿನಿಮಾ ಅಥವಾ ಕಾದಂಬರಿಗಳಲ್ಲಿ ಪ್ರಾರಂಭವಾಗುತ್ತದಲ್ಲ, ಆ ರೀತಿಯಲ್ಲಿ ಅಲ್ಲ. ಅದು ಹೇಗಾಯಿತು ಅಂದರೆ, ಆಯುಷಿ ಈಗ ಉಪನ್ಯಾಸಕಿಯಾಗಿರುವ ಪಿ.ಯು. ಕಾಲೇಜಿನಲ್ಲಿ ನನ್ನಕ್ಕ ಆಗಲೇ ಅಧ್ಯಾಪಕಿಯಾಗಿದ್ದಳು. ಆಯುಷಿಯ ಪಾಠ ಪ್ರವಚನ, ನಡತೆ ಗಿಡತೆ ಎಲ್ಲವನ್ನು ಮೆಚ್ಚಿದ ನನ್ನಕ್ಕನಲ್ಲಿ ನನ್ನಮ್ಮ ಯಾವುದೋ ಒಂದು ಸಂದರ್ಭದಲ್ಲಿ – ನಿನ್ನ ತಮ್ಮನಿಗೆ ಒಂದು ಹುಡುಗಿ ನೋಡು ಎಂದಿದ್ದರಂತೆ. ಆಗ ನಮ್ಮಕ್ಕ ಸಹಜವಾಗಿ, ನಮ್ಮ ಕಾಲೇಜಿನಲ್ಲಿ ಒಬ್ಬಳು ಉಪನ್ಯಾಸಕಿ ಇದ್ದಾಳೆ. ನೋಡಲಿಕ್ಕೂ ಸುಂದರವಾಗಿದ್ದಾಳೆ. ಗುಣನಡತೆಯೂ ಚೆನ್ನಾಗಿದೆ. ಅವಳು ಇಲ್ಲಿ ಪಿ.ಜಿ. ಯಲ್ಲಿದ್ದಾಳೆ ಎಂದು ಹೇಳಿ, ಒಮ್ಮೆ ತನ್ನ ಮನೆಗೆ ಆಯುಷಿ ಬಂದಿದ್ದಾಗ ಮಾತಿನ ನಡುವೆ ಆಕೆಯಲ್ಲಿ – ತಪ್ಪು ತಿಳಿಯದಿದ್ದರೆ ಪ್ರೊಪೋಸಲ್ ಏನಾದರೂ ಇದೆಯಾ ನಿನಗೆ? ಎಂದು ಕೇಳಿದ್ದಳಂತೆ. ಅದಕ್ಕೆ ಅವಳು ಇಲ್ಲ ಮೇಡಂ ಎಂದಳಂತೆ. ಮರುದಿನ ನನ್ನಕ್ಕ, ಅವಳನ್ನೇ ನನಗೆ ಯಾಕೆ ಮಾತನಾಡಿಸಬಾರದು? ಎಂದು ನನ್ನಮ್ಮನಿಗೆ ಹೇಳಿದಳಂತೆ. ನನ್ನಮ್ಮ, ನಿನ್ನ ತಮ್ಮನನ್ನು ನಿನ್ನ ಮನೆಗೆ ಕರೆಸು. ಆ ಸಂದರ್ಭದಲ್ಲಿ ಆಕೆಯೂ ನಿನ್ನಲ್ಲಿಗೆ ಬರುವಂತೆ ಮಾಡು ಎಂದರಂತೆ. ನಾನಾದರೋ ಆ ದಿನಗಳಲ್ಲಿ ಅಕ್ಕನ ಮನೆಗೆ ಆಗೊಮ್ಮೆ ಈಗೊಮ್ಮೆ ಮಾತ್ರ ಕ್ಯಾಜುವಲ್ ಆಗಿ ಹೋಗುತ್ತಿದ್ದೆ. ನನ್ನ ಅಪ್ಪ ಅಮ್ಮ ಎಲ್ಲಾ ಹಳ್ಳಿಯಲ್ಲೇ ಇರುವವರಾದ್ದರಿಂದ ನನಗೆ ಅಕ್ಕನ ಮನೆಗೆ ಹೋದಾಗ ನಮ್ಮ ಮನೆಗೆ ಹೋದಷ್ಟೇ ಖುಷಿಯಾಗುತ್ತಿತ್ತು. ಆದರೆ ಈ ಯಾವ ಸುಳಿವನ್ನೂ ನೀಡದ ಅಕ್ಕ ನನ್ನನ್ನು ಅವಳ ಮನೆಗೆ ಕರೆದಳೆಂದು ನಾನವಳ ಮನೆಗೆ ಹೋಗಿದ್ದಾಗ ಅಲ್ಲಿ ಆಯುಷಿ ಇದ್ದಳು. ಪರಸ್ಪರ ನಮ್ಮ ಪರಿಚಯವನ್ನು ಮಾಡಿಸಿದ ಅಕ್ಕ ಆಯುಷಿ ಮತ್ತು ನನ್ನಲ್ಲಿ ಮಾತುಕತೆ ನಡೆಯುವ ಹಾಗೆ ಮಾಡಿದಳು.

ನಾನು ಅಕ್ಕನ ಮನೆಯಿಂದ ಹೊರಟು ಬರುವಾಗ ಅಕ್ಕ ನನ್ನಲ್ಲಿ, ಇವಳನ್ನು ಅವಳ ಪೇಯಿಂಗ್ ಗೆಸ್ಟ್ ಹೌಸ್‌ಗೆ ಬಿಟ್ಟು ಬಿಡು ಸಂಜೀವ ಎಂದಳು. ನನಗೂ ಅವಳ ಜೊತೆ ಮತ್ತೂ ಮಾತನಾಡುವ ಉತ್ಸಾಹ ಇದ್ದುದರಿಂದ ನಾನು ಆಯುಷಿಯನ್ನು ಕಾರಿನಲ್ಲಿ ಕುಳ್ಳಿರಿಸಿಕೊಂಡು ಅವಳು ವಾಸ್ತವ್ಯ ಇರುವಾಚೆ ಬಿಟ್ಟು ಬಂದೆ. ಆ ರಾತ್ರೆ ಆಯುಷಿ ನನಗೆ ಕನಸಿನಲ್ಲಿ ಬಂದಹಾಗೆ ಆದದ್ದಲ್ಲದೆ, ಮುಜುಗರ ಇಲ್ಲದೆ ಹೇಳುವುದಾದರೆ ನನ್ನ ಒಳಉಡುಪು ಒದ್ದೆಯಾಗಿ ಹೋಯಿತು. ಬೆಳಗ್ಗೆ ಎದ್ದ ಮೇಲೆ ಆಯುಷಿಯ ಫೋನು ನಂಬರ್ ತೆಗೆದುಕೊಳ್ಳದ್ದು ತಪ್ಪಾಯಿತು ಎಂದು ನನಗೆ ಅನಿಸಿತಾದರೂ ಅಕ್ಕನಲ್ಲಿ ಅದನ್ನು ಕೇಳಲಾಗದೆ ಮುಜುಗರಪಟ್ಟು ಸುಮ್ಮನಿದ್ದೆ. ವಾರದ ಮೇಲೆ ಅಕ್ಕ, ನಮ್ಮ ಬಾಡಿಗೆ ಮನೆಯ ವಿಚಾರದಲ್ಲಿ ಒಂದು ಪುಟ್ಟ ತಕರಾರು ಎದ್ದಿದೆ ಸಂಜೀವ. ಆ ರೆಕಾರ್ಡ್‌ನ್ನು ನೀನು ಕಲೆಕ್ಟ್ ಮಾಡ್ತಿಯಾ ಅಥವಾ ಆಯುಷಿ ನಿನ್ನ ಆಫೀಸಿನ ದಾರಿಯಲ್ಲಿ ಹೋಗುವಾಗ ಕೊಟ್ಟು ಹೋಗು ಅನ್ನಲೇ? ಎಂದು ಕೇಳಿದಳು.

ನಾನು ಅಕ್ಕನಿಗೆ, 'ಅದೆಲ್ಲ ಯಾಕೆ? ನಾನೇ ಬರ್‍ತೇನೆ ಎಂದೆ. ಅದಕ್ಕೆ ಅಕ್ಕ – ಬರುವುದು ಬೇಡ ಸಂಜೀವ, ನೀನು 'ಎಸ್' ಎಂದರೆ ಸಾಕು ಮಾರಾಯ, ನಾನು ಆಯುಷಿಗೆ ಕೊಟ್ಟು ಹೋಗ್ತಿಯಾ ಎಂದು ಕೇಳುತ್ತೇನೆ ಎಂದು ಹೇಳಿ ಮರುದಿನ ಆಯುಷಿಯ ಹತ್ತಿರ ಆ ರೆಕಾರ್ಡ್‌ನ್ನು ನನ್ನ ಬಳಿಗೆ ಕಳುಹಿಸಿ ಕೊಟ್ಟಳು. ಆಯುಷಿ ನನ್ನ ಕಚೇರಿಗೆ ಬರುವಾಗ ಸಂಜೆ ಐದೂವರೆಯ ಹೊತ್ತಾಗಿತ್ತು. ಮೂರು ನಾಲ್ಕು ಮಂದಿ ಕಕ್ಷಿಗಾರರು ಇದಿರಿದ್ದರು. ಆಕೆ ಬಂದವಳೇ 'ಸರ್' ಎಂದು ನನ್ನಕ್ಕ ಕೊಟ್ಟ ರೆಕಾರ್ಡ್ಸ್ ಅನ್ನು ನನಗೆ ಕೊಟ್ಟು ಹೋಗುವವಳಿದ್ದನ್ನು ಗಮನಿಸಿದ ನಾನು, 'ನಿಲ್ಲಿ' ಎಂದು ಅವಳನ್ನು ತಡೆದೆ. ನನ್ನ ಎಡಬದಿಯಲ್ಲಿದ್ದ ಕುರ್ಚಿಯನ್ನು ತೋರಿಸಿ, 'ಕುಳಿತು ಕೊಳ್ಳಿ' ಎಂದೆ. ಆಕೆ 'ಸರ್?' ಎಂದಾಗ 'ಅಕ್ಕ ಹೇಗಿದ್ದಾರೆ? ನಿಮ್ಮ ಕ್ಲಾಸು ಹೇಗೆ ನಡೆಯುತ್ತಿದೆ?' ಎಂದು ಮೊದಲಾಗಿ ವಿಚಾರಿಸಲು ಮುಂದಾದೆ. ನಿಂತೇ ಇದ್ದ ಆಕೆಗೆ 'ಇದು ನಿಮ್ಮಲ್ಲಿ ಇರಲಿ' ಎಂದು ನನ್ನ ವಿಸಿಟಿಂಗ್ ಕಾರ್ಡ್‌ನ್ನು ಆಕೆಯ ಕೈಯಲ್ಲಿಟ್ಟೆ. ಪ್ರಾಯಶಃ ಕಕ್ಷಿಗಾರರು ಇಲ್ಲದಿದ್ದಲ್ಲಿ ಆಕೆಯ ಫೋನು ನಂಬರನ್ನು ನಾನು ಕೇಳಿ ಪಡೆಯುತ್ತಿದ್ದೆನೋ ಏನೋ! ಯಾಕೋ ಆಗ ನನಗೆ ಕೇಳಲು ಮುಜುಗರವಾಗಿತ್ತು. ಅಷ್ಟರಲ್ಲಿ ಆಕೆ ಹೊರಟು ನಿಂತು ಪ್ರೀತಿಯ ಕಣ್ಣುಗಳಲ್ಲಿ ನನ್ನನ್ನು ನೋಡುತ್ತಾ 'ಬರ್‍ತೇನೆ ಸರ್' ಎಂದು ಎರಡೆರಡು ಬಾರಿ ಹೇಳಿ ದಡದಡನೆ ಮೆಟ್ಟಿಲಿಳಿದು ಹೋಗಿದ್ದಳು'.

ರಾಯರು ಅಷ್ಟನ್ನು ಕೇಳಿಸಿಕೊಂಡವರೇ 'ಮುಂದೆ ಏನು ನಡೆಯಿತು ಎಂದು ನಾನು ಊಹಿಸಬಹುದು ಅಥವಾ ತರ್ಕಿಸಬಹುದು ಮಿ. ಸಂಜೀವರಾವ್! ಇಂಥ ಪ್ರೇಮ ಪ್ರಕರಣಗಳೆಲ್ಲ ಹೀಗೇ ಮುಂದುವರಿಯುವುದು ಸಹಜ, ಆದರೆ ಫಸ್ಟ್ ಪ್ರೊಪೋಸಲ್ ಮಾಡಿದ್ದು ನೀವೋ ಅಥವಾ ಆಕೆಯೋ?' ಎಂದು ಪ್ರಶ್ನಿಸಿದರು.

ಸಂಜೀವರಾಯರು 'ಇಬ್ಬರಲ್ಲೂ ಮದುವೆ ಆಗೋಣ ಎಂಬ ಭಾವವು ಪ್ರಾಯಶಃ ಒಟ್ಟಿಗೇ ಹುಟ್ಟಿರಬೇಕು ಎಂದು ಅನಿಸುತ್ತದೆ. ಅದಕ್ಕೆ ಕಾರಣ ಮತ್ತೆ ನಾಲ್ಕಾರು ಬಾರಿ ನಾವು ನನ್ನ ಅಕ್ಕನ ಮನೆಯಲ್ಲೇ ಪರಸ್ಪರ ಭೇಟಿಯಾದದ್ದು ಮತ್ತು ಒಂದೆರಡು ಬಾರಿ ಯಾವುದೋ ಕಾರಣ ಹುಡುಕಿ ನನ್ನ ಆಫೀಸಿಗೆ ಆಕೆ ಬಂದದ್ದು, ಕೆಲವು